ಜಮೀನನ್ನು ೫ ವರ್ಷಗಳಲ್ಲಿ ಡೆವಲಪ್‌ಮೆಂಟ್ ಮಾಡುವ ಸಲುವಾಗಿ ಸುಮಾರು ೨೫೬ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರಲ್ಲಿ ರಾಜ್ಯ ಸರ್ಕಾರ ಸುಮಾರು ೧೨೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದವರು ೧೫೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆ ಸಂಖ್ಯೆ ೧೯೨ (ಟಿಔಓ)ಯನ್ನು ಮುಂದೂಡಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ದೇವೇಗೌಡರು ಈ ಇಲಾಖೆಯ ಮಂತ್ರಿಗಳಾಗಿರುವಾಗ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಕೇಳಿರುವ ಪ್ರಶ್ನೆಯನ್ನು ಮುಂದೂಡುವುದು ಎಂದರೆ ಅದರ ಅರ್ಥವೇನು ? ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಎಂದರೆ ಆವರ ತಾಲ್ಲೂಕಿನಲ್ಲಿ ಇರುವಂತಹ ಕಂಟ್ರಾಕ್ಟ್‌ದಾರರು ಯಾರ್ಯಾರು ಎಂದು. ಅದಕ್ಕೆ ಉತ್ತರ ಕೊಡುವುದಕ್ಕೆ ಆಗಲಿಲ್ಲವೆಂದರೆ ಹೇಗೆ ? ತಾವು ತಕ್ಷಣ ಟೆಲಿಫೋನ್ ಮಾಡಿ ವಿಷಯವನ್ನು ತಿಳಿದುಕೊಳ್ಳಬಹುದು. ತಮಗೆ ಬೇಕಾದ ಮಾಹಿತಿಯನ್ನು ಕೊಡದೆ ಇರುವಂತಹ ಅಧಿಕಾರಿಗಳನ್ನು ತಾವು ಏತಕ್ಕೆ ಇಟ್ಟುಕೊಂಡಿದ್ದೀರಿ. ತಕ್ಷಣ ಸಸ್‌ಪೆಂಡ್ ಮಾಡಿ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಜಿಲ್ಲಾ ಮಟ್ಟದಲ್ಲಿರುವಂತಹ ಕಂಟ್ರಾಕ್ಟ್‌ದಾರರ ಹೆಸರುಗಳನ್ನು ಕೇಳಲಿಲ್ಲ. ಅಥವಾ ರಾಜ್ಯ ಮಟ್ಟದ ಕಂಟ್ರಾಕ್ಟ್‌ದಾರರ ಹೆಸರುಗಳನ್ನು ಕೇಳಲಿಲ್ಲ. ಅವರ ತಾಲ್ಲೂಕಿನ ಕಂಟ್ರಾಕ್ಟ್‌ದಾರರ ಹೆಸರುಗಳನ್ನು ಕೇಳಿದ್ದಾರೆ. ಆ ಮಾಹಿತಿಯನ್ನು ತಾವು ತಕ್ಷಣ ಕೊಡಬಹುದಿತ್ತು. ಆದರೆ ಉದ್ದೇಶಪೂರ್ವಕವಾಗಿಯೇ ತಾವು ಹೇಳಂತಿಲ್ಲ ಎನ್ನುವ ಅನುಮಾನ ನಮಗೆ ಬರುತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಉದ್ದೇಶಪೂರ್ವಕವಾಗಿಯೂ ಇಲ್ಲ, ಯಾವುದೂ ಇಲ್ಲ ಕುಳಿತುಕೊಳ್ಳಿ ಹೇಳುತ್ತೇನೆ. ಅವರು ಕೇಳಿರುವ ಪ್ರಶ್ನೆಯನ್ನು ತಾವು ನೋಡಿ. ಮಾನ್ಯ ಸದಸ್ಯರು ಮೂರು ವರ್ಷಗಳ ಮಾಹಿತಿಯನ್ನು ಕೇಳಿದ್ದಾರೆ. ಆದ್ದರಿಂದ ನಾನು ಒಂದು ವಾರ ಟೈಮ್ ಕೇಳಿದ್ದೇನೆ. ಮುಂದಿನ ಮಂಗಳವಾರ ಮಾನ್ಯ ಸದಸ್ಯರಿಗೆ ನಾನು ಉತ್ತರವನ್ನು ಒದಗಿಸಿಕೊಡುತ್ತೇನೆ.

ಅರಣ್ಯ ಇಲಾಖೆ ಗೋಮಾಳ ಹಾಗೂ ಗ್ರಾಮಠಾಣ ಪ್ರದೇಶವನ್ನು ಸೇರಿಸುವುದು.

೪೯೮. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈಗ ಅರಣ್ಯ ಇಲಾಖೆಯವರು ಸಿ ಮತ್ತು ಡಿ ಜಮೀನುಗಳನ್ನು ಗುರುತಿಸಲು ಆಳತೆ ಮಾಡುತ್ತಿದ್ದು ಅದರಲ್ಲಿ ಗ್ರಾಮಗಳಿಗೆ ಸೇರಿದ ಗೋಮಾಳ, ಗ್ರಾಮ ಠಾಣ ಜಾಗಗಳನ್ನು ಸಹ ಸಿ ಮತ್ತು ಡಿ ಜಮೀನಿಗೆ ಸೇರಿಸುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಪಡೆಯಲು ಸರ್ಕಾರದವರು ಕ್ರಮ ಕೈಕೊಳ್ಳವರೇ ?

ಇ) ಸಿ ಮತ್ತು ಡಿ ಜಮೀನುಗಳಿಗೆ ಯಾವುದಾದರೂ ಒಂದು ಮಿತಿ ಅಂದರೆ ಸಾಗುವಳಿ ಜಮೀನಿಗೆ ಮತ್ತು ಗ್ರಾಮಸ್ಥರು ವಾಸಿಸುವ ಜಾಗಕ್ಕೆ ಎಷ್ಟು ದೂರದಲ್ಲಿರಬೇಕೆಂದು ಮಿತಿ ಇದೆಯೇ ?

ಈ) ಗೋಮಾಳ ವಾಸ ಮಾಡದೇ ಖಾಲಿ ಇರುವ ಗ್ರಾಮ ಠಾಣ ಜಮೀನನ್ನು ಸಿ ಮತ್ತು ಡಿ ಜಮೀನಿಗೆ ಸೇರಿಸಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಆ ಬಗ್ಗೆ ಕೈಕೊಂಡ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ಇಲ್ಲ.
ಆ) ಉದ್ಭವಿಸುವುದಿಲ್ಲ.
ಇ) ಇಲ್ಲ.

ಈ) ಕಂದಾಯ ಇಲಾಖೆಯಿಂದ ವರ್ಗಾವಣೆ ಮಾಡಲ್ಪಟ್ಟ ಸಿ ಮತ್ತು ಡಿ ಜಮೀನುಗಳಲ್ಲಿ ಮಾತ್ರವೇ ಭೂ ಮಾಪನ ಮತ್ತು ಸೀಮಾ ನಿರ್ಣಯ ಕೆಲಸಗಳನ್ನು ಕೈಗೊಂಡಿದ್ದು, ಈ ಜಮೀನುಗಳಲ್ಲಿ ಗ್ರಾಮಠಾಣ ಭೂಮಿಗಳು, ಗ್ರಾಮದಲ್ಲಿರುವ ರಸ್ತೆಗಳು ಇನ್ನಿತರ ಗ್ರಾಮದ ಅನುಕೂಲಕ್ಕಾಗಿ ಬಿಟ್ಟಿರುವ ಜಮೀನುಗಳು ಇವುಗಳನ್ನೆಲ್ಲಾ ಸೇರಿಸುತ್ತಿರುವುದಿಲ್ಲ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ ಸಿ ಅಂಡ್ ಡಿ ಜಮೀನುಗಳ ಅಳತೆಯನ್ನು ಫಾರೆಸ್ಟ್ ಇಲಾಖೆಯವರು ಚಿಕ್ಕಮಗಳೂರು, ಶಿವಮೊಗ್ಗ ಮುಂತಾದ ಕಡೆಗಳಲ್ಲಿ ಮಾಡುತ್ತಿದ್ದಾರೆ. ಇದರಲ್ಲಿ ಸಿ ಅಂಡ್ ಡಿ ಲ್ಯಾಂಡ್ ಇಲ್ಲದೆ ಇರುವಂತಹ ಕಡೆಗಳಲ್ಲಿ ಕೂಡ ಜಮೀನನ್ನು ಅಳತೆ ಮಾಡುತ್ತಿದ್ದಾರೆ. ಜೊತೆಗೆ ಗೋಮಾಳ ಜಮೀನನ್ನು ಮತ್ತು ಗ್ರಾಮಠಾಣಕ್ಕೆ ಸೇರಿದ ಜಮೀನನ್ನು ಸಹ ಫಾರೆಸ್ಟ್ ಇಲಾಖೆಯವರು ಅಳತೆ ಮಾಡುತ್ತಿದ್ದಾರೆ. ಇದರಿಂದ ಅಲ್ಲಿರುವಂತಹ ಜನರಿಗೆ ಒಂದು ರೀತಿಯ ಭಯ ಮತ್ತು ಅನುಮಾನ ಬಂದಿದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕು.

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ ಸುಮಾರು ೧೪ ಲಕ್ಷ ಎಕರೆ ಜಮೀನಿನಲ್ಲಿ ಸುಮಾರು ೯ ಲಕ್ಷ ಎಕರೆ ಜಮೀನನ್ನು ಮಾತ್ರ ರೆವಿನ್ಯೂ ಇಲಾಖೆಯವರು ನಮ್ಮ ಇಲಾಖೆಗೆ ವರ್ಗಾವಣೆ ಮಾಡಿ ಕೊಟ್ಟಿದ್ದಾರೆ. ಇದರಲ್ಲಿ ಸುಮಾರು ೫ ಲಕ್ಷ ಎಕರೆ ಜಮೀನನ್ನು ಸರ್ವೆ ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು ೫,೯೨೫ ಎಕರೆಗಳಷ್ಟು ಸಿ ಅಂಡ್ ಡಿ ಲ್ಯಾಂಡ್ ನಮಗೆ ಬಂದಿದ್ದು ಇದರಲ್ಲಿ ಸುಮಾರು ೫,೨೨೬ ಎಕರೆಗಳಷ್ಟು ಜಮೀನು ಮಾತ್ರ ನಾವು ಸರ್ವೆ ಮಾಡಿದ್ದೇವೆ. ಇನ್ನು ಉಳಿದ ೬೯೯ ಎಕರೆ ಜಮೀನನ್ನು ಹಾಗೆಯೇ ಬಿಟ್ಟಿದ್ದೇವೆ. ಇದರಲ್ಲಿ ಯಾವ ಜಮೀನು ಎನ್‌ಕ್ರೋಚ್ ಆಗಿದೆಯೋ ಆ ಜಮೀನನ್ನು ನಾವು ತೆಳತೆ ಮಾಡಿಲ್ಲ. ಈ ಜಮೀನಿನಲ್ಲಿ ಅತಿಕ್ರಮಣ ಕೂಡ ಆಗಿದೆ. ಅಂತಹ ಜಮೀನುಗಳನ್ನು ಅರಣ್ಯ ಇಲಾಖೆ ಸರ್ವೆ ಮಾಡಿಲ್ಲ.

ಶ್ರೀ ಜ್ಞಾನದೇವಪದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಒಂದು ವೇಳೆ ಗ್ರಾಮ ಠಾಣಕ್ಕೆ ಸಂಬಂಧಪಟ್ಟ ಜಮೀನನ್ನು ಅರಣ್ಯ ಇಲಾಖೆಗೆ ಪಂಚಾಯತಿಯವರ ಅನುಮತಿ ಇಲ್ಲದೆ ವರ್ಗಾವಣೆ ಮಾಡಿದ್ದರೆ ಆ ಜಮೀನನ್ನು ಮಂತ್ರಿ ವಾಪಸ್ ಕೊಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ಗ್ರಾಮಠಾಣಕ್ಕೆ ಸಂಬಂಧಪಟ್ಟಂತಹ ಜಮೀನಿನಲ್ಲಿ ಸಾರ್ವಜನಿಕ ಅರಣ್ಯ ಬೆಳೆಸುವಂತೆ ಆಯಾ ವಿಲೇಜ್ ಪಂಚಾಯಿತಿಗೆ ವಹಿಸಿಕೊಡತಕ್ಕಂಥ ನಿರ್ಣಯವನ್ನು ಈಗಾಗಲೇ ನಾವು ಮಾಡಿದ್ದೇವೆ. ಅರಣ್ಯ ಇಲಾಖೆಗೆ ಕೊಟ್ಟಿರತಕ್ಕಂಥ ಜಮೀನನ್ನು ಮಂತ್ರಿ ವಾಪಸ್ ಕೊಡುವ ಪ್ರಶ್ನೆಯೇ ಇಲ್ಲ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ೧೯೭೮ನೇ ಇಸವಿಯಿಂದ ಜಮೀನನ್ನು ಅತಿಕ್ರಮಣ ಮಾಡಿಕೊಂಡು ಬಂದಿದ್ದಾರೆ. ಈಗ ಫಾರೆಸ್ಟ್ ಇಲಾಖೆಗೆ ರೆವಿನ್ಯೂ ಇಲಾಖೆಯವರು ಜಮೀನು ವರ್ಗಾವಣೆ ಮಾಡಿ ಕೊಟ್ಟಿರುವುದರಿಂದ ಫಾರೆಸ್ಟ್ ಇಲಾಖೆಯವರು ಆ ಜಮೀನನ್ನು ಅಳತೆ ಮಾಡುತ್ತಿದ್ದಾರೆ. ಆದರೆ ಅಲ್ಲಿನ ಜನರಿಗೆ ಭಯ ಬಂದಿದೆ. ಮತ್ತು ನಿಮ್ಮ ಇಲಾಖೆಯ ಅಧಿಕಾರಿಗಳು ಜನರನ್ನು ಹೆದರಿಸುತ್ತಿದ್ದಾರೆ. ಈಗ ನವ್ಯ ಮಲೆನಾಡು ಪ್ರದೇಶಗಳಲ್ಲಿ ಸುಮಾರು ೮-೧೦ ಸಾವಿರ ಎಕರೆಗಳಷ್ಟು ಜಮೀನನ್ನು ಹಾಚಿಕೆ ಮಾಡುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರದವರು ಫಾರೆಸ್ಟ್ ಇಲಾಖೆಗೆ ವಹಿಸಿಕೊಟ್ಟಿರುವ ಜಮೀನನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ.ಎ.ಜೀವಿಜಯ.—ಮಾನ್ಯ ಅಧ್ಯಕ್ಷರೇ ಈಗಸಿ ಅಂಡ್ ಲ್ಯಾಂಡ್ ಡಿ ೯ ಲಕ್ಷ ಎಕರೆಗಳಷ್ಟು ಕೊಟ್ಟಿದ್ದೇವೆಂದು ಹೇಳುವುದು ಬರೀ ಪತ್ರಗಳಲ್ಲಿ ಮಾತ್ರ. ಈಗ ಫಾರೆಸ್ಟ್ ಇಲಾಖೆಯವರು ಸರ್ವೆ ಮಾಡಿರುವುದು ಕೇವಲ ೫ ಲಕ್ಷ ಎಕರೆಗಳು ಮಾತ್ರ ಈ ಸಂದರ್ಭದಲ್ಲಿ ಎಲ್ಲಿ ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೋ ಆ ಜಮೀನನ್ನು ನಾವು ಅಳತೆ ಮಾಡುತ್ತಿಲ್ಲ, ನಾನು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ರಾಜ್ಯದಲ್ಲಿ ಒಟ್ಟು ೫೦ ಸಾವಿರ ಎಕರೆಗಳಷ್ಟು ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆ. ಈ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ ನಾನು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಸಹ ಮಾಡಿದ್ದೇನೆ, ಈ ಜಮೀನನ್ನು ಸಕ್ರಮಗೊಳಿಸಿಕೊಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಬೇಕಾಗಿರುತ್ತದೆ. ಮತ್ತು ಸಿ ಅಂಡ್ ಡಿ ಲ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟ ಮೇಲೆ ಆ ಜಮೀನನ್ನು ಮತ್ತೆ ವಾಪಸ್ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಇದು ರಾಷ್ಟ್ರನೀತಿ.

ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ತಾವು ದಯಮಾಡಿ ಕುಳಿತುಕೊಳ್ಳಿ,

ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನಾನು ಮಲೆನಾಡು ಪ್ರದೇಶದಿಂದ ಬಂದವನು. ಇದು ಬಹಳ ಗಂಭೀರವಾದಂಥ ಪ್ರಶ್ನೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಬಡವರು ಎರಡು ಎಕರೆಗಳನ್ನು ಅತಿಕ್ರಮಣ ಮಾಡಿಕೊಂಡಿದ್ದರೆ ಆ ಜಮೀನಿನ ಪಕ್ಕದಲ್ಲಿಯೇ ಫಾರೆಸ್ಟ್ ಇಲಾಖೆಯವರು ಅಳತೆ ಮಾಡಿ ಕಲ್ಲು ಹಾಕಿದ್ದಾರೆ ಭಾಗಾಯ್ತು ಜಮೀನಂ ಇದ್ದು ಅಲ್ಲಿ ಫಾರೆಸ್ಟ್ ಲ್ಯಾಂಡ್ ಇದ್ದಕ್ಕೆ ಅಲ್ಲಿ ಕೂಡ ಇದೇ ರೀತಿ ಮಾಡಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅಲ್ಲಿಕೂಡ ಇದೇ ರೀತಿ ಮಾಡಿದ್ದಾರೆ. ಆದ್ದರಿಂದ ಇಂತಹ ಕಡೆಗಳಲ್ಲಿ ಹೆಚ್ಚು ಜಾಗವನ್ನು ಬಿಟ್ಟುಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಕನಸಗೇರಿ ಏತ ನೀರಾವರಿ ಯೋಜನೆ

೨೨೯. ಶ್ರೀ ಎಂ. ಎಲ್, ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾರ್ಕಂಡೇಯ ಯೋಜನೆಯ ಸರ್ವೇ ಕೆಲಸ ಮುಗಿದಿದೆಯೇ,

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ವಿಶ್ವಬ್ಯಾಂಕ್ ನೆರವಿನಿಂದ ಈ ಯೋಜನೆ ಕೈಗೊಳ್ಳಲು ಸರ್ಕಾರದವರು ತೀರ್ಮಾನಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಈ ಯೋಜನೆಗೆ ಕೇಂದ್ರ ಜಲ ಆಯೋಗದ ಸಹಮತಿ ಪಡೆದಮೇಲೆ ದೊರಕುವ ಸಂಪನ್ಮೂಲಗಳ ಆಧಾರದ ಮೇಲೆ ಕೆಲಸವನ್ನು ತೆಗೆದುಕೊಳ್ಳಲು ಯೋಜಿಸಿದೆ.

ಇ) ಇಲ್ಲ.

ಆ ಕಾಲದಲ್ಲಿ ಇದನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಅರಣ್ಯ ಇಲಾಖೆಯಿಂದ ಸರ್ವ ಆಗಿರಲಿಲ್ಲ. ಮತ್ತು ರವಿನ್ಯೂ ಇಲಾಖೆಗೆ ಈ ಭೂಮಿಯನ್ನು ಗ್ರ್ಯಾಂಟ್ ಮಾಡಿದ್ದಾರೆ. ೧೯೭೮ನೇ ಇಸವಿಯಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ವ್ಯವಸಾಯಗಾರರಿಗೆ ೪ ಎಕರೆ ಅತಿಕ್ರಮ ಮಾಡಿಕೊಡಬೇಕು, ಸಣ್ಣ ಹಿಡುವಳಿದಾರರಿಗೆ ೨ ಎಕರೆ ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ.

ಶ್ರೀ ಎಂ.ಎಲ್. ಮುತ್ತಣ್ಣವರ್.—ಈಗಾಗಲೇ ನಮ್ಮ ಲೋಕೋಪಯೋಗಿ ಸಚಿವರು ಹೇಳಿದಂತೆ, ಗೋಕಾಕ್, ತಾಲ್ಲೂಕು ಬರಗಾಲವನ್ನು ಎದುರಿಸುತ್ತಿದೆ. ಆದ್ದರಿಂದ ಈ ಯೋಜನೆಯನ್ನು ೧೯೮೬–೮೭ರಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಸಚಿವರು).— ಅಧ್ಯಕ್ಷರೆ, ಈ ಯೋಜನೆಯನ್ನು ೧೯೮೫–೮೬ನೇ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ೧೯೮೬–೮೭ಕ್ಕೆ ಸೇರಿಸಲು ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲಿಸುತ್ತೇನೆ.

ಸಂಡೂರು ತಾಲ್ಲೂಕಿನಲ್ಲಿ ಜಲಾನಯನ ಪ್ರದೇಶಕ್ಕೆ ನೀರು ಸರಬರಾಜು

೨೩೪. ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕು ಕಾರೇಕಂಪ್ಪ ಗ್ರಾಮದ ರೈತರು ಸುಮಾರು ೭೦೦ ಎಕರೆ ಜಲಾನಯನ ಪ್ರದೇಶಕ್ಕೆ ನೀರಿನ ಪೂರೈಕೆಗಾಗಿ ಹೋರಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಎಳು ಕ್ಯೂಸೆಕ್ಸ್ ನೀರು ಕೊಡುವ ಪ್ರಯತ್ನ ಮಾಡಲು ಸರ್ಕಾರದವರು ಉದ್ದೇಶಿಸಿರುವರೇ?